**<u>ದಿನಾಂಕ : 21-03-2019 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲು : ಶ್ರೀ ಎಫ್ ಎಮ್ ಎಮ್ ವಕೀಲರಿಂದ :</u>**

ದಾವಾ ಶೆಡ್ಯೂಲ್ ಅ, ಬ, ಕ ಆಸ್ತಿಗಳು ನಮ್ಮ ಮತ್ತು ಪ್ರತಿವಾದಿಯರ ಪಿತ್ರಾರ್ಜಿತ ಆಸ್ತಿಗಳು ಅಂದರೆ ಸರಿಯಲ್ಲ. ಸಾಕ್ಷಿ ರಿ ಸ ನಂ **94/1+2** ನೇದ್ದರ ಆಸ್ತಿ ಮಾತ್ರ ಪಿತ್ರಾರ್ಜಿತ ಆಸ್ತಿ ಇರುತ್ತದೆ ಎಂದು ಹೇಳಿರುತ್ತಾರೆ. ಸದರಿ ಈ ಆಸ್ತಿಯನ್ನು ಪ್ರಮಾಣ ಪತ್ರದಲ್ಲಿ ಬರೆಸಿಲ್ಲ ಅಂದರೆ ಸರಿಯಲ್ಲ. ಮತ್ತೂರು ಗ್ರಾಮದಲ್ಲಿ ನಮಗೆ ಮತ್ತು ಪ್ರತಿವಾದಿಯರಿಗೆ ಹಿರಿಯರಿಂದ ಬಂದಿರುವ ಮನೆಗಳು ಇರುತ್ತವೆ ಅಂದರೆ ಸರಿ. ಸದರಿ ಆ ಮನೆಗಳನ್ನು ನಮ್ಮ ತಂದೆ ಈ ದಾವೆಯಲ್ಲಿ ಸೇರಿಸಿರುವುದಿಲ್ಲ ಅಂದರೆ ಸಾಕ್ಷಿ ಅವುಗಳನ್ನು ಸೇರಿಸುವ ಅವಶ್ಯಕತೆ ಇರುವುದಿಲ್ಲ ಎಂದು ಹೇಳಿರುತ್ತಾರೆ. ಈ ಆಸ್ತಿಗಳನ್ನು ಸೇರಿಸುವ ಅವಶ್ಯಕತೆ ಇರುವುದಿಲ್ಲವೆಂದು ವಾದ ಪತ್ರದಲ್ಲಿ ಮತ್ತು ಪ್ರಮಾಣ ಪತ್ರದಲ್ಲಿ ಬರೆಸಿಲ್ಲ ಅಂದರೆ ಸರಿಯಲ್ಲ. ಸನ್ **1985** ರಲ್ಲಿ ನಮ್ಮ ತಂದೆ ಮತ್ತು **1** ರಿಂದ **3** ನೇ ಪ್ರತಿವಾದಿಯರ ನಡುವೆ ವಾಟ್ನಿ ಆಗಿರುತ್ತದೆ ಅಂದರೆ ಹಾಗೂ ಆ ಪ್ರಕಾರ ಕಬ್ಜಾ ವಹಿವಾಟು ಹೊಂದಿರುತ್ತಾರೆ ಅಂದರೆ ಸಾಕ್ಷಿ ಅಪಸಾತ್ ವಾಟ್ನಿ ಮಾಡಿಕೊಂಡಿದ್ದು ನಿಜ ಎಂದು ಹಾಗೂ ತಮ್ಮ ತಂದೆ ಅನಕ್ಷರಸ್ಥರು ಇದ್ದು ಸದರಿ ತಮ್ಮ ತಂದೆಯ ತಾಯಿಗೆ ಬರುವ ಆಸ್ತಿಯಲ್ಲಿಯೂ ಸಹ ಪಾಲು ಮಾಡಿಕೊಂಡಿರುತ್ತಾರೆಂದು, ಹಾಗೂ ಅದು ಸರಿ ಇರುವುದಿಲ್ಲ ಎಂದು ಹೇಳಿರುತ್ತಾರೆ. ನಮ್ಮ ತಂದೆ ಅನಕ್ಷರಸ್ಥರು ಇದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಮ್ಮ ತಂದೆಯ ತಾಯಿಗೆ ಬರುವ ಆಸ್ತಿಯನ್ನೂ ಕೂಡಾ ಸೇರಿಸಿ ಪಾಲು ಮಾಡಿಕೊಂಡಿರುತ್ತಾರೆಂದು ದಾವೆಯಲ್ಲಿ ಬರೆಸಿಲ್ಲ ಅಂದರೆ ಸರಿಯಲ್ಲ. ನಮ್ಮ ತಂದೆಯ ತಾಯಿಗೆ ಬಂದ ಯಾವುದೇ ಆಸ್ತಿ ಕೂಡಾ ಇರುವುದಿಲ್ಲ ಅಂದರೆ ಸರಿಯಲ್ಲ. ಆ ಬಗ್ಗೆ ಯಾವುದೇ ದಾಖಲೆಗಳನ್ನು ಕೂಡಾ ಹಾಜರು ಪಡಿಸಿಲ್ಲ ಅಂದರೆ ಸರಿಯಲ್ಲ. ನಮ್ಮ ತಂದೆಯ ತಾಯಿಗೆ ಬರುವ ಆಸ್ತಿಯನ್ನು ಕೂಡಿಸಿ ಪಾಲು ಮಾಡಿಕೊಂಡಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಮ್ಮ ತಂದೆಯ ತಾಯಿಯ ಹೆಸರು ಪುಟ್ಟಮ್ಮ ಅಂದರೆ ಸರಿ. ಪುಟ್ಟಮ್ಮ ಯಾವಾಗ ಮರಣ ಹೊಂದಿದ್ದಾರೆ ಹೇಳಲು ಆಗುವುದಿಲ್ಲ. ವಕೀಲರು ಸಾಕ್ಷಿಗೆ ಪುಟ್ಟಮ್ಮ ಮರಣ ಹೊಂದಿದ ಬಳಿಕ ನಿಮ್ಮ ತಂದೆ **12** ವರ್ಷಗಳ ಅವಧಿಯಲ್ಲಿ ಏಕೆ ವಾರ್ಸಾ ಮಾಡಿಕೊಂಡಿಲ್ಲ ಎಂದು ಪ್ರಶ್ನಿಸಿದಾಗ ಸಾಕ್ಷಿಯು ಆಸ್ತಿಯು

ಪುಟ್ಟಮ್ಮನ ತಂದೆ ಗುಡ್ಡನಗೌಡನ ಹೆಸರಿಗೆ ಇತ್ತೆಂದು, ಹಾಗೂ ಸದರಿ ಗುಡ್ಡಪ್ಪನ ಮರಣದ ನಂತರ ಯಾರಿಗೂ ತಿಳಿಸದೇ ಸಿದ್ಧಪ್ಪ ಇವರು ಕರಿಯಪ್ಪ ಇವನೇ ಗುಡ್ಡಪ್ಪನ ವಾರಸುದಾರರೆಂದು ವರದಿ ಕೊಟ್ಟಿರುತ್ತಾರೆಂದು ಎಂದು ಹೇಳಿರುತ್ತಾರೆ. ಸದರಿ ವರದಿಯನ್ನು ಸಿದ್ಧಪ್ಪ ಕೊಟ್ಟಿರುತ್ತಾರೆ. ನಮ್ಮ ಅಪ್ಪ ಗುಡ್ಡಪ್ಪನ ವಾರಸುದಾರ ಇರುವುದಿಲ್ಲ ಅಂದರೆ ಹಾಗೂ ಸಿದ್ಧಪ್ಪ ಆ ರೀತಿ ವರದಿ ಕೊಟ್ಟಿರುವುದಿಲ್ಲ ಅಂದರೆ ಸರಿಯಲ್ಲ. ಗುಡ್ಡಪ್ಪ ದಿ **01-11-1956** ರಂದು ಅರಳಿಕಟ್ಟಿ ಗ್ರಾಮದಲ್ಲಿ ಮರಣ ಹೊಂದಿದ್ದಾರೆ ಅಂದರೆ ನನಗೆ ಗೊತ್ತಿಲ್ಲ. ಗುಡ್ಡಪ್ಪನ ಮರಣದ ನಂತರ ಪುಟ್ಟಮ್ಮ ಮರಣ ಹೊಂದಿದ್ದಾರೆ ಅಂದರೆ ಸರಿ. ದಿ **09-12-1957** ರಂದು ಡ ನಂ **894** ಗುಡ್ಡಪ್ಪ ಸತ್ತ ಬಳಿಕ ಮಂಜೂರು ಆಗಿರುತ್ತದೆ ಅಂದರೆ ಸರಿ. ಸದರಿ ಡ ದಲ್ಲಿ ಗುಡ್ಡಪ್ಪನಿಗೆ ಹೆಂಡತಿ ಮತ್ತು ಗಂಡು ವ ಹೆಣ್ಣು ಮಕ್ಕಳು ಇರುವುದಿಲ್ಲವೆಂದು ನಮೂದು ಆಗಿರುತ್ತದೆ ಅಂದರೆ ಸರಿ. ಅದೇ ರೀತಿ ದಿ **01-11-1956** ರಂದು ಆದ ಧೂಳಿಕೊಪ್ಪ ಗ್ರಾಮದ ಡ ನಂ **473** ರಲ್ಲಿ ಗುಡ್ಡಪ್ಪನಿಗೆ ಹೆಂಡತಿ ಮತ್ತು ಗಂಡು ವ ಹೆಣ್ಣು ಮಕ್ಕಳು ಇರುವುದಿಲ್ಲವೆಂದು ನಮೂದು ಆಗಿರುತ್ತದೆ ಅಂದರೆ ನಿಜ. ಸಾಕ್ಷಿ ಸದರಿ ಡ ಗಳನ್ನು ಸಿದ್ಧಪ್ಪ ಆ ರೀತಿ ಮಂಜೂರು ಮಾಡಿಸಿ ಕೊಂಡಿದ್ದಾನೆ ಎಂದು ಹೇಳಿರುತ್ತಾರೆ. ಸದರಿ ಡ ಗಳನ್ನು ಸಿದ್ಧಪ್ಪ ಆ ರೀತಿ ಮಂಜೂರು ಮಾಡಿಕೊಂಡಿದ್ದಾನೆಂದು ನಾವು ದಾವೆಯಲ್ಲಿ ಎಲ್ಲಿಯೂ ಬರೆಸಿಲ್ಲ ಅಂದರೆ ಸರಿಯಲ್ಲ. ಅದೇ ರೀತಿ ಪ್ರಮಾಣ ಪತ್ರದಲ್ಲಿ ಕೂಡಾ ಬರೆಸಿಲ್ಲ ಅಂದರೆ ಸರಿಯಲ್ಲ. ಕರಿಯಪ್ಪನ ಮೊಮ್ಮಕ್ಕಳ ಪೈಕಿ ನಮ್ಮ ತಂದೆಯೇ ಹಿರಿಯವನು ಅಂದರೆ ಸರಿ. ಸನ್ **1956** ರಲ್ಲಿ **1** ರಿಂದ **3** ನೇ ಪ್ರತಿವಾದಿಯರು ಇನ್ನೂ ಹುಟ್ಟಿರಲಿಲ್ಲ ಅಂದರೆ ನನಗೆ ಗೊತ್ತಿಲ್ಲ. ಗುಡ್ಡಪ್ಪ ಈತನು ಕರಿಯಪ್ಪನ ಅಣ್ಣನ ಮಗ ಅಂದರೆ ಸರಿ. ಕರಿಯಪ್ಪ ಹುಟ್ಟಿದ ಅಲ್ಪವಯಿ ಮಗ ಇದ್ದುದರಿಂದ ಸಿದ್ಧಪ್ಪ ವರದಿ ಕೊಟ್ಟು ಖಾತೆ ಬದಲಾವಣೆ ಮಾಡಿಸಿದ್ದಾರೆ ಅಂದರೆ ಸರಿಯಲ್ಲ. ಗುಡ್ಡಪ್ಪ ಇವರಿಗೆ ಪುಟ್ಟವ್ವ ಎನ್ನುವ ಮಗಳು ಇರಲಿಲ್ಲ ಅಂದರೆ ಸರಿಯಲ್ಲ. ಈ ವಿಷಯ ನಮ್ಮ ತಂದೆಯಿಂದ ನಾನು ಅಪಾರ್ಥ ಮಾಡಿಕೊಂಡು ಆಸ್ತಿ ನಮ್ಮ ತಂದೆಯ ತಾಯಿ ಇಂದ ಬಂದಿರುತ್ತದೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. **1** ರಿಂದ **3** ನೇ ಪ್ರತಿವಾದಿಯರು ನಮ್ಮ ತಂದೆಯ ವಿರುದ್ಧ ಓ ಎಸ್ ನಂ **122/2008** ನೇದ್ದರ ದಾವೆ ಹಾಕಿದ್ದರು ಅಂದರೆ ಸರಿ. ಸದರಿ ಆ ದಾವೆಯಲ್ಲಿ ಸಾಕ್ಷಿಗಳ ವಿಚಾರಣೆ ಆಗಿರುತ್ತದೆ ಅಂದರೆ ಸರಿ. **1** ರಿಂದ **3** ನೇ ಪ್ರತಿವಾದಿಯರು ಆ ದಾವೆಯನ್ನು ತಾಂತ್ರಿಕ ದೋಷದ ಕಾರಣಕ್ಕೆ ಹಿಂಪಡೆದು ಹೊಸ ದಾವೆ ಹಾಕಿರುತ್ತಾರೆ ಅಂದರೆ ಸರಿ. ಅವರು ಆ ದಾವೆ ಹಿಂಪಡೆಯಲು ಆದ ನ್ಯಾಯಾಲಯದ

ಆದೇಶವನ್ನು ನಾವು ಪ್ರಶ್ನಿಸಿ ಮಾನ್ಯ ಉಚ್ಚ ನ್ಯಾಯಾಲಯಕ್ಕೆ ಕೇಸು ಮಾಡಿದ್ದೆವು ಅಂದರೆ ಸರಿ. ಸದರಿ ಓ ಎಸ್ ನಂ **122/2008** ನೇದ್ದರಲ್ಲಿ ನಮ್ಮ ತಂದೆ ಶೀಗಿಹಳ್ಳಿ ವಕೀಲರ ಮೂಲಕ ಹಾಜರಾಗಿ ಪ್ರತಿವಾದ ಪತ್ರ ಸಲ್ಲಿಸಿರುತ್ತಾರೆ ಅಂದರೆ ಸರಿ. ಸದರಿ ಆ ದಾವೆಯಲ್ಲಿ ನಮ್ಮ ತಂದೆ ಸಾಕ್ಷಿಯಾಗಿ ವಿಚಾರಣೆ ಮಾಡಿಕೊಂಡಿದ್ದಾರೆ ಅಂದರೆ ಸರಿ. ಸದರಿ ಆ ದಾವೆ **1** ರಿಂದ **3** ನೇ ಪ್ರತಿವಾದಿಯರು ಮಾಲೀಕತ್ವದ ಘೋಷಣೆಗಾಗಿ ಹಾಕಿದ್ದರು ಅಂದರೆ ನನಗೆ ಗೊತ್ತಿಲ್ಲ. ನಮ್ಮ ಮತ್ತು ಪ್ರತಿವಾದಿಯರ ಮನೆತನದಲ್ಲಿ ನಾನೇ ಹೆಚ್ಚು ಶಿಕ್ಷಣ ಪಡೆದವನು ಅಂದರೆ ಸಾಕ್ಷಿ ತಾವು ಬಿ ಎ ಪದವಿ ಮಾಡಿರುತ್ತಾರೆಂದು ಹಾಗೂ ಪ್ರತಿವಾದಿಯರ ಮಕ್ಕಳೂ ಸಹ ಶಿಕ್ಷಣ ಪಡೆದಿರುತ್ತಾರೆಂದು, ಹಾಗೂ ಅವರು ಎಲ್ಲಿಯವರೆಗೆ ಓದಿರುತ್ತಾರೆಂದು ತಮಗೆ ಗೊತ್ತಿಲ್ಲವೆಂದು ಹೇಳಿರುತ್ತಾರೆ. ಪ್ರತಿವಾದಿಯರು ಅನಕ್ಷರಸ್ಥರು ಇದ್ದುದರಿಂದ ಅವರ ಖಾತೆಗೆ ಇರುವ ಆಸ್ತಿಗಳನ್ನು ಕಬಳಿಸಲು ನಮ್ಮ ತಂದೆಯ ಮೂಲಕ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಮ್ಮ ತಂದೆ ನನಗೆ ಯಾವುದೇ ಅಧಿಕಾರ ಪತ್ರ ಕೊಟ್ಟಿಲ್ಲದಿದ್ದರೂ , ನಮ್ಮ ತಂದೆ ಕೋರ್ಟಿಗೆ ಬಂದರೆ ನಿಜ ಸಂಗತಿ ಹೊರ ಬೀಳುತ್ತದೆಂದು ನಾನು ಸುಳ್ಳು ಸಂಗತಿಗಳನ್ನು ಒಳಗೊಂಡ ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ಅ (ಇ) ನೇದ್ದರ ರಿ ಸ ನಂ **33 /1 + 2 + 3 + 4** ರ ಜಮೀನನ್ನು **4** ಮತ್ತು **5** ನೇ ಪ್ರತಿವಾದಿಯರು ರೂ. **96,000/-** ಗಳಿಗೆ ಖರೀದಿ ಹಿಡಿದಿದ್ದಾರೆ ಅಂದರೆ ಸರಿ. ಸದರಿ ಆಸ್ತಿಗೆ **4** ಮತ್ತು **5** ನೇ ಪ್ರತಿವಾದಿಯರ ಹೆಸರು ನಮೂದಾಗಿ ಸುಮಾರು **20** ವರ್ಷಗಳು ಆಗಿರುತ್ತದೆ ಅಂದರೆ ನನಗೆ ಗೊತ್ತಿಲ್ಲ. ನಾವು **4** ಮತ್ತು **5** ನೇ ಪ್ರತಿವಾದಿಯರ ಹೆಸರಿನ ಖರೀದಿ ಪತ್ರವನ್ನು ಪ್ರಶ್ನಿಸಿ ಸಕಾಲದಲ್ಲಿ ಯಾವುದೇ ಕ್ರಮ ಕೈಗೊಂಡಿಲ್ಲ ಅಂದರೆ ಸರಿಯಲ್ಲ. ಸದರಿ ಆಸ್ತಿಗೆ **4** ಮತ್ತು **5** ನೇ ಪ್ರತಿವಾದಿಯರು ಮಾಲೀಕರಾಗಿ ಕಬ್ಜಾ ವಹಿವಾಟು ಹೊಂದಿರುತ್ತಾರೆ ಅಂದರೆ ಸರಿ. **1** ರಿಂದ **3** ನೇ ಪ್ರತಿವಾದಿಯರು ತಮ್ಮ ಜೀವಿತ ಅವಧಿಯಲ್ಲಿಯೇ ತಮ್ಮ ಪಾಲಿಗೆ ಬಂದ ಆಸ್ತಿಗಳಲ್ಲಿ ಹಿಸ್ಸೆ ಮಾಡಿಕೊಂಡು ಪ್ರತ್ಯೇಕವಾಗಿ ವಹಿವಾಟು ಹೊಂದಿರುತ್ತಾರೆ ಅಂದರೆ ಸರಿಯಲ್ಲ. ಅವರು ವಾಟ್ನಿ ಮಾಡಿಕೊಂಡ ಬಗ್ಗೆ ದಿ **11-08-1999** ರಂದು ಡ ನಂ **2388** ಮಂಜೂರು ಆಗಿರುತ್ತದೆ ಅಂದರೆ ನನಗೆ ಗೊತ್ತಿಲ್ಲ. **1** ರಿಂದ **3** ನೇ ಪ್ರತಿವಾದಿಯರು ಮನೆಗಳ ಪಡಿತರ ಚೀಟಿ, ಮತದಾರರ ಯಾದಿ ಹಾಗೂ ಅವರವರ ವ್ಯವಹಾರ ಬೇರೆ ಬೇರೆ ಇರುತ್ತದೆ ಅಂದರೆ ನನಗೆ ಗೊತ್ತಿಲ್ಲ. ಈ ಎಲ್ಲ ವಿಷಯ ನಮಗೆ ಸನ್ **1985** ರ ಮುಂಚಿನಿಂದಲೂ ಗೊತ್ತಿದ್ದರೂ ಕೂಡಾ

ಗೊತ್ತಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ದಾವಾದ ಎಲ್ಲ ಆಸ್ತಿಗಳು ವಿಭಾಜಿತ ಆಸ್ತಿಗಳು ಅಂದರೆ ಸರಿಯಲ್ಲ. ನಾನು ನಮ್ಮ ತಂದೆಗೆ ದಾವೆಯಿಂದ ಹೊರಗುಳಿಸಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).**

ಓ.ಹೇ.ಕೆ.ಸರಿ ಇದೆ.

ಸಹಿ

ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಲಯ, ಬ್ಯಾಡಗಿ.